ಅಹಂಕಾರದಿಂದ ಜೇಬಿಗಿಳಿಸಿ ಒಂದು ರೀತಿ ನಿರಾಳನಾಗಿ ಮನೆಗೆ ಬಂದೆ.

ಆಗ ಯಾರೋ, 'ಸ್ವಾಮೀ! ಅಪಾರ ಅಭಿನಂದನೆಗಳು' ಎಂದು ಮೆಲು ದನಿಯಲ್ಲಿ ಹೇಳಿದ್ದು ಕೇಳಿಸಿತು.

'ಓ ನೀನು? ಭಾಗು! ಭಾಗು ಭಾಯ್! ಜಗತ್ತು ನಿನ್ನನ್ನ ಗುರುತಿಸಿಲ್ಲ! ಆದರೇನಂತೆ? ಭಾಗು, ನಾನು ಗುರುತಿಸಿದ್ದೇನಲ್ಲ! ಇರಲಿ. ಅದು ನಿನಗೂ ಗೊತ್ತು! ನಿನ್ನ ಯೇಸುವಿಗೂ ಗೊತ್ತಿದೆ... ಪಾದ್ರಿ ಲೊಬೊ, ಪ್ರಪಂಚದ ಮಹಾನ್ ಪುರುಷ... ನಿನ್ನ ಮೇಲೆ ದೇವರ ಕೃಪೆ ಇರಲಿ!'

ನನ್ನ ಗಂಟಲು ಒಣಗಿತು. ಸಾಯುತ್ತಿದ್ದ ಭಾಗುವಿನ ಹೆಂಡತಿ ಮತ್ತು ಮಗುವಿನ ಚಿತ್ರ ನನ್ನ ಕಣ್ಣ ಮುಂದೆ ತೇಲಿ ಬಂತು. ಹಾರಗಳ ಭಾರದಿಂದ ನನ್ನ ಕತ್ತು ಕುಸಿದುಹೋದಂತೆ ಭಾಸವಾಯಿತು. ಕಾಣಿಕೆಯ ಹಣದ ಭಾರದಿಂದ ನಾನು ಕುಗ್ಗಿಹೋದೆ. ಇಷ್ಟೆಲ್ಲಾ ಪುರಸ್ಕಾರ, ಗೌರವವನ್ನು ಪಡೆದ ನಂತರವೂ ದುಃಖಿಯಾಗಿದ್ದೆ.

## ರಾಜೆಂದರ್ ಸಿಂಗ್ ಬೇಡಿ (1915–1984)

ಈಗ ಪಾಕಿಸ್ತಾನದಲ್ಲಿರುವ ಸಿಯಾಲ್ ಕೋಟ್‌ನಲ್ಲಿ ಜನಿಸಿದ ಬೇಡಿ ಉರ್ದು ಸಾಹಿತ್ಯದ ಬಹುಮುಖ್ಯ ಪ್ರಗತಿಶೀಲ ಲೇಖಕ, ಕತೆಗಾರ, ನಾಟಕಕಾರ. ಜಮ್ಮು–ಕಾಶ್ಮೀರದ ಬ್ರಾಡ್ ಕಾಸ್ಟಿಂಗ್ ಸರ್ವೀಸಿನ ನಿರ್ದೇಶಕರಾಗಿದ್ದ ಬೇಡಿ ಮುಂದೆ ಚಿತ್ರರಂಗ ಪ್ರವೇಶಿಸಿದರು. ಹಿಂದೀ ಸಿನಿಮಾ ನಿರ್ದೇಶಕರಾದರು. ಚಿತ್ರಕತೆ, ಸಂಭಾಷಣೆ ಲೇಖಕರಾದರು.

ಭಾರತ – ಪಾಕಿಸ್ತಾನ ವಿಭಜನೆಯ ಕಾಲದ ದಾರುಣ ಅನುಭವಗಳ ಕತೆಗಳನ್ನು ಬೇಡಿ ಬರೆದಿದ್ದಾರೆ; 'ಗರಮ್ ಕೋಟ್' 'ಗ್ರಹಣ್', 'ಅಪನೆ ದುಃಖ್ ಮುಝೇ ದೇ ದೋ', 'ಕೋಖ್ ಜಲಿ' ಅವರ ಮುಖ್ಯ ಕಥಾಸಂಕಲನಗಳು. 'ಸಾತ್ ಖೇಲ್' ಅವರ ನಾಟಕ. 1965ರಲ್ಲಿ ಅವರ 'ಏಕ್ ಚಾದರ್ ಮೈಲಿ ಸಿ' (ಒಂದು ಮಲಿನ ಚಾದರ) ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಉರ್ದು ನಾಟಕಕ್ಕಾಗಿ ಗಾಲಿಬ್ ಪ್ರಶಸ್ತಿ, ಸಿನಿಮಾಗಳಿಗೆ ಫಿಲ್ಮ್ ಫೇರ್ ಪ್ರಶಸ್ತಿ ಲಭಿಸಿವೆ. ಬೇಡಿ ನಿರ್ದೇಶಿಸಿದ ಸಿನಿಮಾಗಳು: 'ದಸ್ತಕ್', 'ಆಂಖೇ ದೇಖಿ', 'ನವಾಬ್ ಸಾಹಿಬ್.' ಬೇಡಿ ಸಂಭಾಷಣೆ ಬರೆದ ಪ್ರಖ್ಯಾತ ಹಿಂದೀ ಸಿನಿಮಾಗಳು: 'ಮಿರ್ಜಾ ಗಾಲಿಬ್' 'ದೇವದಾಸ್' 'ಮಧುಮತಿ' 'ಅಭಿಮಾನ್'.

ಅವರ 'ಪ್ಲೇಗ್ ಮತ್ತು ಕ್ವಾರಂಟೈನ್' ಕತೆ ಈಗಿನ ಕರೋನಾ ಸಾಂಕ್ರಾಮಿಕ ರೋಗದ ಕಾಲದಲ್ಲಿ ಮತ್ತೆ ಮುನ್ನೆಲೆಗೆ ಬಂದು ಚರ್ಚೆಯಲ್ಲಿದೆ.

## ಷಾಕಿರಾ ಖಾನಂ

ಬೆಂಗಳೂರಿನ ಅಲ್–ಅಮೀನ್ ಪದವಿ ಶಿಕ್ಷಣ ಸಂಸ್ಥೆಯಲ್ಲಿ ಹಿಂದೀ ಪ್ರಾಧ್ಯಾಪಕಿ. 'ನಿಷೆ' ಅವರ ಪ್ರಕಟಿತ ಕವನ ಸಂಕಲನ. ಪ್ರಕಟಿತ ಕೃತಿಗಳು: 'ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮುಸ್ಲಿಂ ಮಹಿಳೆಯರ ಕೊಡುಗೆ' (ಅನುವಾದ), 'ಮುಸ್ಲಿಂವೆಲ್ಲರಿ', 'ಮುಸ್ಲಿಂ ಮಹಿಳೆಯರು ಮತ್ತು ಗಾಂಧೀಜಿಯ ಪತ್ರಗಳು', 'ಕೆಂಡಗಳು' (ಅನುವಾದಿತ ಕಥಾಸಂಕಲನ), 'ಇಂದಿರಾ ಗಾಂಧಿಯ ವ್ಯಕ್ತಿತ್ವ ಮತ್ತು ವರ್ಚಸ್ಸು' (ಅನುವಾದ).